**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

**ಖಾಸಗಿ ಪ್ರಕರಣ ಸಂಖ್ಯೆ ಃ 26 / 2016**

**PW - 01**

| | |
|---|---|
| ಹೆಸರು | ಸಚ್ಚಿದಾನಂದ ಮೂರ್ತಿ |
| ತಂದೆ ಹೆಸರು | ಹೆಚ್ ಪಿ ನಂಜುಂಡಯ್ಯ |
| ವಯಸ್ಸು | 51 |
| ಉದ್ಯೋಗ | ಮುಖ್ಯ ಪೇದೆ , ಮೈಸೂರು ಸರ್ಕಲ್ , ಚಾಮರಾಜಪೇಟೆ |
| ವಿಳಾಸ | ಹೇಮಾಪುರ |

**ದಿನಾಂಕಃ 25.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಿರ್ಯಾದುದಾರರ ಸ್ವಖುಷಿ ಹೇಳಿಕೆ ಃ-**

ಪ್ರಸ್ತುತ ದೂರನ್ನು ನನ್ನ ತಂದೆಯವರಾದ ನಂಜುಂಡಯ್ಯ ರವರು ದಿನಾಂಕ 21.07.1987ರ ಕ್ರಯಪತ್ರವನ್ನು ತಿದ್ದುಪಡಿ ಮಾಡಿರುತ್ತಾರೆ ಎಂದು ಪ್ರಸ್ತುತ ದೂರನ್ನು ರೇಣುಕಮ್ಮ, ಹೆಚ್.ಸಿ ಗಂಗಾಧರಯ್ಯ ಮತ್ತು ವಿ.ನಾಗರೆಡ್ಡಿ ವಕೀಲರ ವಿರುದ್ದ ಸಲ್ಲಿಸಿದ್ದರು. ದಿನಾಂಕ 03.12.2011 ರಂದು ಅಸಲು ದಾವೆ ನಂ.305/1993 ಹಾಗೂ ಅಸಲು ದಾವೆ ನಂ .141/1991 ಹಾಗೂ ಅಸಲು ದಾವೆ ನಂ.189/1998 ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ನಡೆಯುತ್ತಿದ್ದವು. ಬೆಳಿಗ್ಗೆ ನಮ್ಮ ತಂದೆಯವರು ವಿಚಾರಣೆಗೆ ಹಾಜರಾಗಿದ್ದರು ಹಾಗೂ ವಿಚಾರಣೆಗಾಗಿ ಮಧ್ಯಹ್ನ 3.00 ಗಂಟೆಗೆ ಸದರಿ ದಾವೆಗಳನ್ನು ಮುಂದೂಡಿದ್ದರು. ಮಧ್ಯಹ್ನ ಸುಮಾರು 2.30ರ ಸಮಯದಲ್ಲಿ ನನ್ನ ತಂದೆಯವರು ಬೆಂಚ್ ಮೇಲೆ ಕೂತಿದ್ದಾಗ ಹೊರಗಡೆಯಿಂದ ಆರೋಪಿಗಳು ಬಂದು ಬೆಂಚ್ ಕ್ಲರ್ಕ್ ರವರಿಂದ ನಮ್ಮ ದಾವೆಯ ಕಡತಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ದಾವೆಯ ಕಡತಗಳನ್ನು ಪರಿಶೀಲನೆ ಮಾಡುವ ನೆಪದಲ್ಲಿ ಸಹಿ ಮೇಲೆ ಸಹಿ ಹಾಗೂ ಹೆಬ್ಬೆಟ್ಟಿನ ಮೇಲೆ ಹೆಬ್ಬೆಟ್ಟನ್ನು ಆರೋಪಿಗಳು ಸೇರಿ ಹಾಕಿರುತ್ತಾರೆ. ನನ್ನ ತಂದೆಯವರು ಸದರಿ ವಿಷಯವನ್ನು

ತಮ್ಮ ವಕೀಲರಿಗೆ ತಿಳಿಸಿರುತ್ತಾರೆ. ಮಧ್ಯಹ್ನ 3.00ಗಂಟೆಗೆ ನ್ಯಾಯಾಧೀಶರು ಬಂದಾಗ ನಮ್ಮ ವಕೀಲರು ಆರೋಪಿಗಳು ಸದರಿ ಸಹಿಗಳನ್ನು ತಿದ್ದಿದ ಬಗ್ಗೆ ನ್ಯಾಯಾಧೀಶರಿಗೆ ತಿಳಿಸಿರುತ್ತಾರೆ. ನಂತರ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ತಿದ್ದಿರುವುದು ಕಂಡುಬಂದಿರುತ್ತದೆ. ನಂತರ ನಾವು ಪ್ರಸ್ತುತ ಖಾಸಗಿ ಪ್ರಕರಣವನ್ನು ದಾಖಲಿಸಿರುತ್ತೇವೆ. ನಂತರ ಆರೋಪಿಗಳನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಹಾಗೂ ಸದರಿ ಆರೋಪಿಗಳ ಮಾದರಿ ಸಹಿಗಳನ್ನು ಮತ್ತು ಹೆಬ್ಬೆಟ್ಟಿನ ಗುರುತನ್ನು ಪಡೆದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ. ನಂತರ 5-6 ವರ್ಷಗಳ ನಂತರ ಸದರಿ ವಿಧಿವಿಜ್ಞಾನ ಪ್ರಯೋಗಾಲಯದಿಂದ ವರಧಿ ಬಂದಿರುತ್ತದೆ. ಸದರಿ ವರಧಿಯಲ್ಲಿ ತಿದ್ದಿರುವುದು ನಿಜ ಎಂದು ವರಧಿ ಬಂದಿರುತ್ತದೆ. ಪೋಲಿಸ್ ಠಾಣೆಯಿಂದ ನಮಗೆ ನ್ಯಾಯಾ ಸಿಕ್ಕಿರುವುದಿಲ್ಲ. ಆ ಕಾರಣ ಆರೋಪಿಗಳ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. 2ನೇ ಆರೋಪಿ ರೇಣುಕಮ್ಮ ಈಗ ಮರಣಹೊಂದಿರುತ್ತಾರೆ. ನನ್ನ ತಂದೆಯು ದಿನಾಂಕ 04.11.2016 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ವಿಷಯಗಳನ್ನು ನನ್ನ ತಂದೆಯವರೆ ನನಗೆ ಹೇಳಿದ್ದರು.

**ಈ ಹಂತದಲ್ಲಿ ಮುಂದುವರೆದ ಸ್ವಖುಷಿ ಹೇಳಿಕೆಗೆ ಕಾಲವಾಕಶ ಕೋರಿದ್ದು ಮುದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**